**ದಿನಾಂಕಃ 05.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ವೇತನ ಪಟ್ಟಿಯನ್ನು **ನಿಪಿ 18** ಎಂದು, ಅಕೌಂಟ್ ಸ್ಟೇಟ್‌ಮೆಂಟ್ ಅನ್ನು **ನಿಪಿ 19** ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ನಿಪಿ 18ರಲ್ಲಿ ನಮೂದಿಸಿರುವ ಸಂಘದಲ್ಲಿ ನಾನು ಅಪಘಾತಕ್ಕೂ ಪೂರ್ವ ಕೆಲಸ ಮಾಡುತ್ತಿದ್ದೆ. ಆ ಸಮಯದಲ್ಲಿ ನನ್ನ ಸಂಬಳದ ಹಣವನ್ನು ನನ್ನ ಖಾತೆಗೆ ಹಾಕುತ್ತಿದ್ದರು. ನನ್ನ ಸಂಬಳದ ಹಣ ಜಮಾ ಆದ ಬಗ್ಗೆ ನಿಪಿ 19 ರಲ್ಲಿ ನಮೂದು ಇಲ್ಲ. ನಿಪಿ 19 ರಲ್ಲಿ ಗುರುತಿಸಿರುವ ಭಾಗಗಳಲ್ಲಿ ನಮೂದು ಮಾಡಿದ ಹಣವನ್ನು ನಾವು ಮಾಡಿದ ಕೆಲಸದ ಆಧಾರದ ಮೇರೆಗೆ ಸ್ವಿಗ್ಗಿಯಿಂದ ಖಾತೆಗೆ ಹಾಕುತ್ತಿದ್ದರು. ದಿನಾಂಕ 15.02.2023ರ ನಂತರದಲ್ಲಿ ಸ್ವಿಗ್ಗಿ ಮತ್ತು ನನ್ನ ನಡುವೆ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸಾಕ್ಷಿಯು ನಾವು ಸಾಮಾಗ್ರಿಗಳನ್ನು ನೀಡಿದಾಗ ಹಣವನ್ನು ನಗದು ರೂಪದಲ್ಲಿ ನೀಡಿದಲ್ಲಿ ಆ ಬಗ್ಗೆ ನಿಪಿ 19 ರಲ್ಲಿ ನಮೂದು ಇಲ್ಲ ಎಂದು ನುಡಿಯುತ್ತಾರೆ. ಸ್ವಿಗ್ಗಿಯಲ್ಲಿ ಕೆಲಸ ಮಾಡಿದರೆ ಮಾತ್ರ ಹಣ ಬರುತ್ತದೆ. ಸ್ವಿಗ್ಗಿಗೆ ಸಂಬಂಧಪಟ್ಟ ಗುರುತಿನ ಚೀಟಿ ಈಗಲೂ ನನ್ನ ಬಳಿ ಇದೆ. ಸದರಿ ದಾಖಲಾತಿ ನನ್ನ ಬಳಿ ಇರುವ ಕಾರಣ ಈಗಲೂ ನಾನು ಸ್ವಿಗ್ಗಿಯಲ್ಲಿ ಕೆಲಸ ಮಾಡಬಹುದು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮೆಟ್ಟಿಲುಗಳನ್ನು ಹತ್ತಲು ಮತ್ತು ಇಳಿಯಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಈಗಲೂ ಸ್ವಿಗ್ಗಿಯಲ್ಲಿ ಕೆಲಸ ಮಾಡುತ್ತಿದ್ದು, ನಗದು ರೂಪದಲ್ಲಿ ನನ್ನ ಹಣದ ವ್ಯವಹಾರ ನಡೆಯುತ್ತಿದೆ ಎಂದರೆ ಸರಿಯಲ್ಲ. ನಿಪಿ 18ರ ಸಂಘದಲ್ಲಿ ನಾನು ಈಗ ಕೆಲಸ ಮಾಡುತ್ತಿಲ್ಲ ಮತ್ತು ರಾಜಿನಾಮೆ ನೀಡಿರುತ್ತೇನೆ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ. ನಿಪಿ18 ಕ್ಕೆ ಸಂಬಂಧಪಟ್ಟ ವ್ಯಕ್ತಿಯನ್ನು ಕರೆಯಿಸಿ ವಿಚಾರಣೆಗೆ

ಒಳಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನಿಪಿ 19 ರಲ್ಲಿ ಹಣದ ವ್ಯವಹಾರದ ಬಗ್ಗೆ ಸಮರ್ಪಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದ ಅನುಕೂಲತೆಗಾಗಿ ದಾಖಲಾತಿಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ 4ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ನಿಪಿ 18ಕ್ಕೆ ಸಂಬಂಧಪಟ್ಟಂತೆ ನೇಮಕಾತಿ ಆದೇಶವನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಿಪಿ 18ರಲ್ಲಿ ನಮೂದಿಸಿರುವ ಸಂಘಕ್ಕೆ ನಾನು 2016-17ರಲ್ಲಿ ಸೇರಿರಬಹುದು. ನಿಪಿ 18ರಲ್ಲಿ ನಮೂದಿಸಿರುವ ಸಂಬಳವನ್ನು ಕರ್ನಾಟಕ ಬ್ಯಾಂಕಿನ ನನ್ನ ಖಾತೆಗೆ ಹಾಕುತ್ತಿದ್ದರು ಎಂದರೆ ಸಾಕ್ಷಿಯು ಸಂಪೂರ್ಣವಾಗಿ ಹಾಕುತ್ತಿರಲಿಲ್ಲ, ಕೇವಲ ಭತ್ಯೆಗಳನ್ನು ಮಾತ್ರ ಹಾಕುತ್ತಿದ್ದರು ಎಂದು ನುಡಿಯುತ್ತಾರೆ. ನಿಪಿ 18ರ ಸಂಘದಲ್ಲಿ ನಾನು ಕುಳಿತು ಕೆಲಸ ಮಾಡುತ್ತೇನೆ. ಕರ್ನಾಟಕ ಬ್ಯಾಂಕಿನ ಅಕೌಂಟ್ ಸ್ಟೇಟ್‌ಮೆಂಟ್ ಅನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನಾನು ಕೆಲಸಕ್ಕೆ ಬರಲು ಆಗುವುದಿಲ್ಲ ಎಂದು ನಿಪಿ 18ರ ಸಂಘಕ್ಕೆ ಯಾವುದೇ ಪತ್ರವನ್ನು ನೀಡಿಲ್ಲ. ನಾನು ಈಗಲೂ ಸಹ ನಿಪಿ 18ರ ಸಂಘದಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಆದ ಕಾರಣ ಸಂಪೂರ್ಣ ಅಕೌಂಟ್ ಸ್ಟೇಟ್ ಮೆಂಟ್ ಅನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ 18ರ ಮುಖ್ಯ ಕಛೇರಿ ದಾವಣಗೆರೆಯಲ್ಲಿ ಇದ್ದು, ಬೆಂಗಳೂರಿನ ಶಾಖಾ ಕಛೇರಿಯಲ್ಲಿ ನಾನು ಕೆಲಸ ಮಾಡುತ್ತಿದ್ದೆ. ಸದರಿ ಕಛೇರಿಯಿಂದ ನನಗೆ ವೇತನ ಪಟ್ಟಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸ್ವಿಗ್ಗಿಯಲ್ಲಿ ಬೆಂಗಳೂರಿನಲ್ಲಿ ಮಾತ್ರ ಆಹಾರ ತಲುಪಿಸುವ ಕೆಲಸ ಮಾಡುತ್ತಿದ್ದೆ. ಈಗ ನಾನು ನೆಲಮಂಗಲದಲ್ಲಿ ವಾಸವಾಗಿದ್ದೇನೆ. ಪ್ರಸ್ತುತ ಪ್ರಕರಣದ ಅನುಕೂಲತೆಗಾಗಿ ದಾಖಲಾತಿಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ 1ನೇ ಎದುದಾರರ ಪರ ಮಾನ್ಯ ವಕೀಲರಿಂದ.**

1ನೇ ಎದುರುದಾರರ ಪರ ಮಾನ್ಯ ವಕೀಲರು ಗೈರು ಹಾಜರಾದ ಕಾರಣ ಮುಂದುವರೆದ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**